ಎರಡು ಗೌರವ ಡಾಕ್ಟರೇಟ್ ಪದವಿಗಳನ್ನು ಪಡೆದಿದ್ದ ವಿಜಯಲಕ್ಷ್ಮಿ ಪಂಡಿತ ಅವರು ಭಾರತದ ಪ್ರಥಮ ಮಹಿಳಾ ಮಂತ್ರಿಗಳು, ಪ್ರಥಮ ಮಹಿಳಾ ರಾಯಭಾರಿಗಳು, ವಿಶ್ವಸಂಸ್ಥೆಗೆ ಸ್ವತಂತ್ರ ಭಾರತದ ಮೊಟ್ಟಮೊದಲ ನಿಯೋಗಕ್ಕೆ ನಾಯಕಿಯಾಗಿಯೂ ಅವಿಶ್ರಾಂತಿವಾಗಿ ದುಡಿದಿದ್ದ ಧೀಮಂತ ಮಹಿಳೆ ಎಂಬ ಕೀರ್ತಿ ಇವರದಾಗಿರುತ್ತದೆ. ಇವರ ನಿಧನದಿಂದ ಭಾರತದ ರಾಜಕೀಯ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕ್ಷೇತ್ರಗಳು ಬಡವಾಗಿವೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನ ಆಚರಿಸಿದರು)

ದಿವಂಗತ ಕುಟುಂಬ ವರ್ಗದವರಿಗೆ ಈ ಸಭೆ ಅಂಗೀಕರಿಸಿದ ಸಂತಾಪ ಸೂಚನೆ ನಿರ್ಣಯವನ್ನು ತಿಳುಹಿಸಿಕೊಡಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ವಿಷಯ : ಮುಂಬಡ್ತಿಯಲ್ಲಿ ಮೀಸಲಾತಿಯನ್ನು ಅನುಷ್ಠಾನಗೊಳಿಸುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೧೯೦(ಲಖಳ)

ಶ್ರೀ ಜಿ. ಎಂ. ಕಾನಡೆ (ಸಿಸಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನೌಕರರಿಗೆ ಆಗುತ್ತಿರುವ ಅನ್ಯಾಯ ಸರ್ಕಾರದ ಗಮನಕ್ಕೆ ಬಂದಿದೆಯೇ ? ಮುಂಬಡ್ತಿ ವಿಷಯದಲ್ಲಿ ಅನುಷ್ಠಾನ ಮಾಡದಿರಲು ಕಾರಣವೇನು ?

ಶ್ರೀ ಕೆ. ಎಚ್. ಪಾಟೀಲ್ (ಸಹಕಾರ ಸಚಿವರು) : ೧) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನೌಕರರಿಗೆ ಬಡ್ತಿ ಮೀಸಲಾತಿ ಸೌಲಭ್ಯ ಸಿಗದೆ ಆಗುತ್ತಿರುವ ಅನ್ಯಾಯ ಸರ್ಕಾರದ ಗಮನಕ್ಕೆ ಬಂದಿದೆ. ಸರ್ಕಾರದಿಂದ ನಿರ್ದೇಶನ ಬಾರದ ಕಾರಣ ಬಡ್ತಿಯಲ್ಲಿ ಮೀಸಲಾತಿ ಕೊಡಲು ಸಾಧ್ಯವಿಲ್ಲ ಎನ್ನುವ ಕಾರಣವನ್ನು ಬ್ಯಾಂಕು ನೀಡಿದ್ದು ಈ ಬಗ್ಗೆ ಅಗತ್ಯ ನಿರ್ದೇಶನವನ್ನು ಸಹಕಾರ ಸಂಘಗಳ ನಿಬಂಧಕರು ದಿನಾಂಕ ೧೩-೯-೯೦ ರಂದು ಸಹಕಾರ ಸಂಘಗಳ ಕಾಯಿದೆ ೧೯೫೯ ರ ಕಲಂ ೬೦-ಬಿ ರೀತಿ ನೀಡಿರುತ್ತಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ : ಮಾನ್ಯ ಅಧ್ಯಕ್ಷರೇ, ಉತ್ತರವನ್ನೇನೋ ಕೊಟ್ಟಿದ್ದಾರೆ. ಆದರೆ ಇದು ಸರಿಯಾದ ಉತ್ತರವಲ್ಲ. ಏಕೆಂದರೆ ಪ್ರತಿ ಸಲ ಕೇಳಿ

ದಾಗಲೂ ಇದೇ ಉತ್ತರವನ್ನು ಕೊಡುತ್ತಾರೆ. ಅಪೆಕ್ಸ್ ಬ್ಯಾಂಕ್‌ನಲ್ಲಿ ಹರಿಜನ ಗಿರಿಜನರುಗಳಿಗೆ ೧೯೭೮ ರಿಂದ ಇದುವರೆಗೂ ಬಡ್ತಿಯನ್ನು ಕೊಟ್ಟಿಲ್ಲ. ನಾನು ಪ್ರತಿ ಸಲವೂ ಈ ಪ್ರಶ್ನೆಯನ್ನು ಕೇಳಿದರೆ ಇದೇ ಉತ್ತರ ಬರುತ್ತದೆಯೇ ವಿನಹ ಬೇರೆ ಉತ್ತರವೇನೂ ಇಲ್ಲ. ಅವರುಗಳಿಗೆ ೧೯೭೮ ರಿಂದ ಏನು ಅನ್ಯಾಯವಾಗಿದೆ, ಅದನ್ನು ಸರಿಪಡಿಸುತ್ತೇವೆ ಎಂದು ಮಾನ್ಯ ಮಂತ್ರಿಗಳು ಭರವಸೆಯನ್ನು ಕೊಟ್ಟರೆ ನಮಗೆ ಸಮಾಧಾನವಾಗುತ್ತದೆ.

ಶ್ರೀ ಕೆ. ಹೆಚ್. ಪಾಟೀಲ : ಮಾನ್ಯ ಅಧ್ಯಕ್ಷರೇ ಮಂತ್ರಿಗಳು ಉತ್ತರ ಏನು ಇರುತ್ತದೆ, ಅದನ್ನೇ ಕೊಡಬೇಕಾಗುತ್ತದೆ. ನಮಗೆ ಆ ಬ್ಯಾಂಕಿನಿಂದ ಉತ್ತರ ಏನು ಬಂದಿದೆ, ಆ ಪ್ರಕಾರವಾಗಿಯೇ ಉತ್ತರವನ್ನು ಕೊಟ್ಟಿದ್ದೇನೆ. ಅಲ್ಲಿ ಪರಿಶಿಷ್ಟ ವರ್ಗದ ಜನಾಂಗದವರಿಗೆ ಇಲ್ಲಿಯತನಕವೂ ರಿಸರ್ವೇಷನ್ನನ್ನು ಕೊಟ್ಟಿಲ್ಲ. ಆ ರಿಸರ್ವೇಷನ್ನನ್ನು ಏತಕ್ಕೆ ಕೊಟ್ಟಿಲ್ಲ ಎಂದು ಅವರಿಂದ ಸಮಜಾಯಿಷಿಯನ್ನು ಕೂಡ ಕೇಳಿದ್ದೆವು ನಮಗೆ ಸರ್ಕಾರದಿಂದ ಇದರ ಬಗ್ಗೆ ಏನೂ ನಿರ್ದೇಶನ ಸಿಕ್ಕಿರಲಿಲ್ಲ. ಅದರ ಸಲುವಾಗಿ ಕೊಟ್ಟಿಲ್ಲ ಎಂದು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ. ಈಗ ನಾವು ಡೈರೆಕ್ಷನ್ಸ್‌ನ್ನು ಕೊಟ್ಟಿದ್ದೇವೆ. ಯಾವ ಪ್ರಕಾರವಾಗಿ ಇದನ್ನು ಸರಿಪಡಿಸಬೇಕು ಎಂದು ಉಳಿದ ಬ್ಯಾಂಕಿನವರೊಡನೆ ವಿಚಾರ ಮಾಡಿ ಕೆಲಸವನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ ಸರ್ಕಾರದವರು ಕೂಡ ಅತ್ತಕಡೆ ಗಮನವನ್ನು ಹರಿಸಿ ಅದನ್ನು ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಎಂ. ಮಹದೇವ : ಸರ್ಕಾರದಿಂದ ಅಪೆಕ್ಸ್ ಬ್ಯಾಂಕಿಗೆ ೧೫ ಪರ್‌ಸೆಂಟ್ ರಿಸರ್ವೇಷನ್ನನ್ನು ಕೊಡಬೇಕು ಆ ರೀತಿ ರಿಸರ್ವೇಷನ್ನನ್ನು ಕಾದಿರಿಸ ಬೇಕು ಎಂದು ಹೇಳಿ ನಿರ್ದೇಶನ ಯಾವಾಗ ಹೋಗಿತ್ತು ? ಅವರು ಅದನ್ನ ಅನುಷ್ಠಾನ ಮಾಡಿದ್ದಾರೆಯೇ ? ಕಾಯಿದೆ ಪ್ರಕಾರ ಅಪೆಕ್ಸ್ ಬ್ಯಾಂಕ್‌ನವರು ಕಾರ್ಯವನ್ನು ನಿರ್ವಹಿಸುತ್ತಿದ್ದಾರೆಯೇ ?

ಶ್ರೀ ಕೆ. ಎಚ್. ಪಾಟೀಲ : ಮಾನ್ಯ ಅಧ್ಯಕ್ಷರೇ ನಾನು ಆಗಲೇ ಹೇಳಿದೆ. ಸರ್ಕಾರದಿಂದ ೫೦-ಬಿ ಡೈರೆಕ್ಷನ್ಸ್ ಇತ್ತೀಚೆಗೆ ಅವರಿಗೆ ಹೋಗಿದೆ. ಮೊದಲಿಗೆ ನಿರ್ದೇಶನವನ್ನು ಕೊಟ್ಟಿರಲಿಲ್ಲ ಅವರು ಸರ್ಕಾರದಿಂದ ನಿರ್ದೇಶನ ಸಿಕ್ಕಿಲ್ಲದಿದ್ದರೂ ಕೂಡ ಮಾಡಬಹುದಾಗಿತ್ತು. ಸರ್ಕಾರದ ನಿಯಮಾವಳಿಗನುಸಾರವಾಗಿ ಸಿವಿಲ್ ಸರ್ವೀಸ್ ರೂಲ್ಸ್‌ನ್ನು ನೋಡಿಕೊಂಡು ಸರ್ಕಾರದ ಪಾಲಿಸಿ ಪ್ರಕಾರ ಮಾಡಬಹುದಾಗಿತ್ತು. ಆದರೆ ಅವರು ಮಾಡಿಲ್ಲ. ಏತಕ್ಕೆ ಮಾಡಲಿಲ್ಲ ಎಂದು ಕೇಳಿದಾಗ ನಮಗೆ ಸರ್ಕಾರದಿಂದ ೫೦-ಬಿ ನಿರ್ದೇಶನ ಕೊಟ್ಟಿರಲಿಲ್ಲ ಎಂದು ತಿಳಿಸಿದ್ದಾರೆ. ಈಗ ಅವರಿಗೆ ೫೦-ಬಿ ನಿರ್ದೇಶನ ಹೋಗಿದೆ. ಮುಂದೆ ಏನು ಮಾಡುತ್ತಾರೆಂದು ಕಾದು ನೋಡೋಣ.

ಶ್ರೀ ಎಂ ಮಹದೇವ : ೫೦-ಬಿ ಪ್ರಕಾರ ಕ್ರಮ ತೆಗೆದುಕೊಳ್ಳದಿದ್ದರೆ ಸರ್ಕಾರ ಏನಾದರೂ ಆ ಬ್ಯಾಂಕ್‌ನವರ ಮೇಲೆ ಕ್ರಮ ತೆಗೆದುಕೊಳ್ಳುತ್ತದೆಯೆ ?

ಶ್ರೀ ಕೆ. ಕುಶಾಲ : ಮಾನ್ಯ ಅಧ್ಯಕ್ಷರೇ, ಹಿಂದಿನ ಸರ್ಕಾರ ೩೦-ಬಿ ನಿರ್ದೇಶನವನ್ನು ರದ್ದು ಮಾಡಿ ಹೊಸ ನೇಮಕ ಮಾಡಬಹುದು ಎಂದು ಹೇಳಿ ಆದೇಶವನ್ನು ಕೊಟ್ಟಿದ್ದಾರೆಯೇ ? ಆದೇಶ ಕೊಟ್ಟಿದ್ದೇ ಆಗಿದ್ದರೆ ಅಪೆಕ್ಸ್ ಬ್ಯಾಂಕ್‌ನವರು ಸರ್ಕಾರದ ಆದೇಶವನ್ನು ಇಲ್ಲಿ ಪರಿಶೀಲಿಸಿಲ್ಲವೇ ?

ಅಧ್ಯಕ್ಷರು : ೩೦-ಬಿ ನಿರ್ದೇಶನ ಆಧಾರ ಪ್ರಕಾರ ಆದೇಶವನ್ನು ಕೊಟ್ಟಿದ್ದಾರೆಯೇ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ : ನಾನು ಆಗಲೇ ಹೇಳಿದೆ; ಈಗ ನಿರ್ದೇಶನವನ್ನು ಕೊಟ್ಟಿದ್ದೇವೆ. ಆ ರೀತಿ ಕೊಟ್ಟಮೇಲೆ ವಿಚಾರ ಮಾಡುತ್ತೇವೆ ಎಂದು ಹೇಳಿದ್ದಾರೆ. ಸರ್ಕಾರದವರು ಅದನ್ನು ಪರಿಶೀಲನೆ ಮಾಡಿ ನೋಡಲಿಕ್ಕೆ ಹತ್ತಿದ್ದಾರೆ.

ವಿಷಯ : ಜವಹಾರ್ ರೋಜ್ಗಾರ್ ಯೋಜನೆಯಡಿಯಲ್ಲಿ ಮಂಜೂರಾಗಿರುವ ಹಣ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೧೫೯ (೭೦೯)

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜವಾಹರ ರೋಜಗಾರ ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯಕ್ಕೆ ಮಂಜೂರಾಗಿರುವ ಒಟ್ಟು ಮೊತ್ತವೆಷ್ಟು ?

ಆ) ಇದರಲ್ಲಿ ಹಣದ ರೂಪದಲ್ಲಿ ನೀಡುವ ಭಾಗ ಮತ್ತು ಆಹಾರ ಧಾನ್ಯಗಳ ರೂಪದಲ್ಲಿ ನೀಡುವ ಭಾಗವೆಷ್ಟು ?

ಇ) ಈ ಯೋಜನೆಯಡಿಯಲ್ಲಿ ಭಾರತ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಭಾಗವೆಷ್ಟು ?

ಈ) ಜವಾಹರ ರೋಜಗಾರ ಯೋಜನೆಯಡಿಯಲ್ಲಿ ಇದುವರೆವಿಗೂ ಖರ್ಚಾಗಿರುವ ಹಣ ಎಷ್ಟು ?

ಉ) ಉಳಿದಿರುವ ಹಣವನ್ನು ಖರ್ಚು ಮಾಡಲು ರಾಜ್ಯ ಸರ್ಕಾರವು ಯಾವುದಾದರೂ ಕ್ರಮ ತೆಗೆದುಕೊಳ್ಳಲಾಗಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಸಚಿವರು) : ಅ) ೨೦೦೫-೦೬ ಲಕ್ಷ ರೂಪಾಯಿಗಳು

ಆ) ಪ್ರಸಕ್ತ ಸಾಲಿನಿಂದ ಪರಿಷ್ಕೃತ ನಿಯಮಗಳಂತೆ ಅನುದಾನವನ್ನು ಹಣದ ರೂಪದಲ್ಲಿ ನೀಡಿದ್ದು ಆಹಾರ ಧಾನ್ಯಗಳ ಪ್ರಮಾಣವನ್ನು ಕೇಂದ್ರ ಸರ್ಕಾರವು ಜಿಲ್ಲೆಗಳಿಗೆ ನಿಗದಿಪಡಿಸಿದ್ದು ಬೇಡಿಕೆಗೆ ಅನುಸಾರವಾಗಿ ಅನುದಾನದ ಹಣದಲ್ಲಿಯೇ ನೇರವಾಗಿ ಭಾರತ ಆಹಾರ ನಿಗಮದ ಪಾವತಿ ಮಾಡಿ ಪಡೆಯಬಹುದಾಗಿದೆ. ರಾಜ್ಯಕ್ಕೆ ಒಟ್ಟು ಅಂದಾಜು ೭೦. ಟಿ. ಅಕ್ಕಿಯನ್ನು ನಿಗದಿ ಮಾಡಲಾಗಿದೆ.